ಶ್ರೀ ಬಿ. ಪುಟ್ಟಸ್ವಾಮಯ್ಯ : ನಿಮ್ಮ ಈ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಮೈಸೂರು ರಾಜ್ಯಕ್ಕೆ ಸ್ಥಾಪಾಂತರ ಪ್ರದೇಶಗಳಲ್ಲಿರುವ ಜನರು ಈ ರೀತಿಯಾಗಲು ನಿಮ್ಮ ಮಂತ್ರಿ ಮಂಡಲದಲ್ಲಿರುವ ಶ್ರೀ ಬಸವಲಿಂಗಪ್ಪನವರು ಕೆಲವು ಕಡೆ ಕೆಲವು ರೀತಿಯಾವ ಹೇಳಿಕೆಗಳನ್ನು ಕೊಡುತ್ತಿರುವುದು ಒಂದು ಕಾರಣ ವಲ್ಲವೇ ? ಹಳ್ಳಿಗಾಡಿನಲ್ಲಿ ಇದುವರೆಗೂ ಅಣ್ಣ ತಮ್ಮಂದಿರಂತೆ ಜನರು ನಡೆದುಕೊಂಡು ಹೋಗುತ್ತಿದ್ದರು. ಈಚೆಗೆ ಈ ರೀತಿಯಾಗಿಲ್ಲವೆ ?

ಉತ್ತರವಿಲ್ಲ

ಶ್ರೀ ಕಾಗೋಡು ತಿಮ್ಮಪ್ಪ : ಸಂತೆಮಾರಳ್ಳಿಯಲ್ಲಿರುವ ಹರಿಜನರನ್ನು ರಕ್ಷಣೆ ಮಾಡುವುದು ಸರಕಾರದ ಜವಾಬುದಾರಿಯಲ್ಲವೇ ? ಇವರಿಗೆ ಬೇರೆ ಕಡೆಗಳಲ್ಲಿ ಉದ್ಯೋಗಗಳನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ನಾವು ಆದಷ್ಟೂ ಉದ್ಯೋಗಗಳನ್ನು ಒದಗಿಸಲು ಪ್ರಯತ್ನ ಮಾಡುತ್ತಿದ್ದೇವೆ. ಈಗಾಗಲೇ ಇದರ ಬಗ್ಗೆ ಸರಕಾರ ತಕ್ಕ ಕಾರ್ಯಕ್ರಮಗಳನ್ನು ಮಾಡುತ್ತಿದೆ.

ಶ್ರೀ ಎಂ. ಬಿ ರಾಮಸ್ವಾಮಿ : ಇದೇ ರೀತಿ ರಾಜ್ಯದಾದ್ಯಂತ ನೋಡಿದರೆ ಬಹುಶಃ ಹರಿಜನರು ಇನ್ನೂ ಹರಿಜನರಾಗಿಯೇ ಹಿಂದುಳಿದಿರಬೇಕೆಂದು ಸರಕಾರದ ಅಭಿಪ್ರಾಯವೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ : ದೇಶದಲ್ಲಿ ಬಡವರಾಗಿರಕಕ್ಕ ಹಾಗೂ ಹಿಂದುಳಿದಿರತಕ್ಕ ಹರಿಜನರಿಗೆ ಎಲ್ಲ ರೀತಿಯ ಸೌಕರ್ಯಗಳನ್ನು ಮಾಡಿಕೊಡಬೇಕು ಎಂದು ಇರುವ ಅಭಿಪ್ರಾಯವನ್ನು ಎಲ್ಲರೂ Plebeians and patricians ಒಪ್ಪಿಕೊಳ್ಳುತ್ತಾರೆ.

ಹರಿಜನರಿಗೇನು ಕಷ್ಟಗಳಿವೆ ಅವನ್ನು ನಿವಾರಣೆ ಮಾಡಿ ಆದಷ್ಟೂ ಕಡಿಮೆ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಸರಕಾರಕ್ಕೆ ಹರಿಜನರ ಕಷ್ಟಗಳೇನು ಎನ್ನುವುದು ಮನವರಿಕೆಯಾಗಿದೆ ಮತ್ತು ಎಲ್ಲ ಸದಸ್ಯರಿಗೂ ಇದು ಮನವರಿಕೆಯಾಗಿದೆ, ಇದರಲ್ಲಿ ನಾವು ಹಾಗೂ ಎಲ್ಲ ಸದಸ್ಯರೂ ಒಟ್ಟಿಗೆ ಸಹಾಯ ಮಾಡಿದರೆ ಇದರ ಬಗ್ಗೆ ಯಂತಸ್ವಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಇಲ್ಲಿ ಹೇಳಲು ಇಚ್ಛಿಸುತ್ತೇನೆ.

WIDENING OF ARSIKERE TANK BUND

100. SRI H. S. SIDDAPPA (Arsikere).—

Will the Minister for Public Works and Electricity be pleased to state :—

(*a*) the estimated cost for widening the Arsikere tank bund ;

(*b*) whether the work was executed departmentally or by contract after calling for tender ;

(*c*) total outlay so far spent on this work ?

SRI H. M. CHANNABASAPPA — Minister for Public Works and Electricity.

(*a*) Rs. 35,000.

(*b*) The work has been completed on piece work system through a contractor.

(*c*) Rs. 36,731.

ಶ್ರೀ ಹೆಚ್. ಎಸ್. ಸಿದ್ದಪ್ಪ : ಈ ಕೆರೆ ತಿರಿಯಂ ಬಂಡನ್ನು ಆಗಲ ಮಾಡಲು ಇಲ್ಲಿ ಹಣ ಖರ್ಚು ಮಾಡಿದೆ ಎಂದು ಹೇಳಿದೆ. ಕೇವಲ ಅರ್ಧ ಫರ್ಲಾಂಗಿನಷ್ಟು ಮಾತ್ರ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ : ಆಗಲ ಮಾಡುವ ಕೆಲಸ ಮಾಡುವಾಗ ಇದಕ್ಕೆ ಒಂದು ರೀತಿಯಲ್ಲಾದ ಕಾರ್ಯವಿಧಾನದ ಇರುತ್ತದೆ. ಇದನ್ನು ಒಂದೇ ದಿವಸದಲ್ಲಿ ಮಾಡಲಾಗುವುದಿಲ್ಲ. ಹಂತ ಹಂತದಲ್ಲಿ ಮಾಡಲಾಗುತ್ತದೆ

ಶ್ರೀ ಹೆಚ್. ಎಸ್. ಸಿದ್ದಪ್ಪ : ಎಷ್ಟಿಮೇಟುಗಳನ್ನು ಮಾಡುವಾಗ ತುಣುಕು ತುಣುಕಾಗಿ ಮಾಡುತ್ತೀರಾ ? ಇಲ್ಲವೇ ಆಗಲಮಾಡುವ ಒಟ್ಟು ಕೆಲಸಕ್ಕಾಗಿ ಎಸ್ಟಿಮೇಟು ಮಾಡುತ್ತೀರೋ ?

ಶ್ರೀ ಹೆಚ್. ಎಂ. ಚನ್ನಬಸಪ್ಪ : ಇದರಲ್ಲಿ ಒಂದು ಕೆರೆ ಬರಬಹುದು. ಇದು ಒಂದು ಮೈಲಿ ಇರಬಹುದು. ಇಲ್ಲವೇ ಬಹಳ ದೊಡ್ಡದಾಗಿರಬಹುದು. ಆಯಾ ವರ್ಷದಲ್ಲಿ ಕೆಲಸ ಮಾಡುವಾಗ ಯಾವುದು ಬಹಳ ಕಡಿಮೆ ಇದೆಯೋ ಅದಕ್ಕೆ ಮೊದಲು ಪ್ರಾಶಸ್ತ್ಯ ಕೊಟ್ಟು ಅನಂತರ ಅದಕ್ಕಿಂತ ಸ್ವಲ್ಪ ಹೆಚ್ಚಾಗಿರುವ ಕೆರೆಗಳ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಇರುವ ಅಂದಾಜುಗಳನ್ನು ನೋಡಿಕೊಂಡು ಹಣದ ಪರಿಸ್ಥಿತಿಯನ್ನೂ ನೋಡಿಕೊಂಡು ಕೆಲಸ ಮಾಡುತ್ತೇವೆ.

ಶ್ರೀ ಹೆಚ್. ಎಸ್. ಸಿದ್ದಪ್ಪ : ಇಲ್ಲಿರುವ ಬಂಡು ಬಹಳ ಮುಂಖ್ಯವಾಗಿದೆ ಮತ್ತು ಇದು ಸಣ್ಣದಾಗಿದೆ ಮತ್ತು ಇಲ್ಲಿರುವ ಕರ್ವನ್ನು ಸರಿಮಾಡಿದರೆ ಇಲ್ಲಿ ಬಹಳ ಅನುಕೂಲವಾಗುತ್ತದೆ. ಇದನ್ನು ಬೇಗನೆ ಮಾಡಿಸಿಕೊಡುವ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ : ಇದು ಬಾಟಾ ಮಾರ್ಗದಲ್ಲಿದೆ, ಆ ಕಡೆಗೆ ನಾನು ಹೋದಾಗ ಇಲ್ಲಿ ಹೇಗೆ ಕೆಲಸ ಮಾಡಿದ್ದಾರೆ ಏಂಬುದನು ನೋಡುತ್ತೇನೆ. ಮತ್ತು ಇದುವರೆಗೆ ಮಾಡಿರುವ ಕೆಲಸಗಳಲ್ಲಿ ಏನಾದರೂ ಲೋಪದೋಷಗಳಿದ್ದರೆ ಅದನ್ನು ಸರಿಪಡಿಸಬಹುದು ಮತ್ತು ಇದು ತೀವ್ರವಾಗಿ ಅಗತ್ಯವಾಗಿದೆ ಎಂದು ಕಂಡು ಬಂದರೆ ಅದನ್ನು ಮಾಡುವ ವ್ಯವಸ್ಥೆ ಮಾಡುತ್ತೇವೆ.

SALE OF LAND BY MYSORE SUGAR FACTORY, MANDYA

129 SRI KAGODU THIMMAPPA (Sagar).—

Will the Minister for Industries be pleased to state:—

(*a*) the extent of land belonging to the Sugar Factory, Mandya sold so far;

(*b*) the number of persons who have purchased the land so sold;

(*c*) the basis on which the price of the above land was fixed while selling them and the average value fixed per acre ?

SRI S. M. KRISHNA (Minister for Industries).—

(*a*) Out of the land belonging to the factory an extent of 2017 acres and 11 Guntas of land belonging to Mysore Sugar Factory, Ltd., Mandya has been sold upto 20th June 1973.

(*b*) The land so sold was purchased by 854 persons. Their names and addresses are shown in the list placed on the Table of the House.*

---

* Copy placed in the Mysore Legislative library *vide* No. 9 Date 10th Septmber 1973.